# ನೊಣಗಳ ಲೋಭ

ಹಿಂದೀಮೂಲ : **ಹನುಮಾನ್ ಪ್ರಸಾದ್‌ಪೋದ್ದಾರ್**


ಕನ್ನಡಕ್ಕೆ : **ಬಿ.ಎನ್.ಲಕ್ಷ್ಮೀನಾರಾಯಣ**

ಒಬ್ಬ ವ್ಯಾಪಾರಿಯು ತನ್ನ ಗ್ರಾಹಕನಿಗೆ ಜೇನು ತುಪ್ಪವನ್ನು ಕೊಡುತ್ತಿರುವಾಗ ಅಕಸ್ಮಾತ್ ಕೈಜಾರಿ ಜೇನುತುಪ್ಪದ ಪಾತ್ರೆ ಕೆಳಗೆ ಬಿದ್ದಿತು. ಅದರಲ್ಲಿದ್ದ ಬಹಳಷ್ಟು ಜೇನು ತುಪ್ಪ ನೆಲದ ಮೇಲೆ ಹರಿಯಿತು. ವ್ಯಾಪಾರಿಯು ಎಷ್ಟು ಸಾಧ್ಯವೋ ಅಷ್ಟು ಜೇನುತುಪ್ಪವನ್ನು ಮೇಲೆ ಮೇಲೆ ತೆಗೆದು ಪಾತ್ರೆಗೆ ಹಾಕಿದನು. ಆದರೆ ಸ್ವಲ್ಪ ಭಾಗ ನೆಲದಲ್ಲೇ ಉಳಿದು ಅದನ್ನು ಬಳಿದುಕೊಳ್ಳಲಾಗಲಿಲ್ಲ.

ಅಲ್ಲಿಯೇ ಹಾರಾಡುತ್ತಿದ್ದ ನೊಣಗಳು ಜೇನುತುಪ್ಪದ ಸವಿಗಾಗಿ ಹಾರಿ ಬಂದು ಅದರ ಮೇಲೆ ಕುಳಿತವು. ಜೇನುತುಪ್ಪದ ಸ್ವಾದವು ಅವುಗಳಿಗೆ ಇಷ್ಟವಾಗಿ ನೊಣಗಳು ಬೇಗ ಬೇಗನೆ ನೆಕ್ಕಿದವು. ಹೊಟ್ಟೆ ತುಂಬುವವರೆಗೂ ನೆಕ್ಕಿದವು.

ಹೊಟ್ಟೆ ತುಂಬಿದ ಮೇಲೆ ನೊಣಗಳು ಹಾರಲು ಹೊರಟವು. ಆದರೆ ಅವುಗಳ ರೆಕ್ಕೆಗಳು ಜೇನುತುಪ್ಪಕ್ಕೆ ಅಂಟಿಕೊಂಡವು. ಹಾರಲು ಎಷ್ಟೇ ಚಡಪಡಿಸಿ ಪ್ರಯತ್ನಿಸಿದರೂ ಅವುಗಳ ರೆಕ್ಕೆಗಳು ಅಷ್ಟೇ ಹೆಚ್ಚಾಗಿ ಅಂಟಿಕೊಳ್ಳುತ್ತಿದವು. ಅವುಗಳ ಶರೀರವೆಲ್ಲವೂ ಜೇನುತುಪ್ಪಮಯವಾಯಿತು.

ಬಹಳಷ್ಟು ನೊಣಗಳು ಜೇನಿನಲ್ಲಿ ಹೊರಳಾಡಿ ಹೊರಳಾಡಿ ಸತ್ತುಹೋದವು. ಇನ್ನು ಹಲವು ನೊಣಗಳು ರೆಕ್ಕೆ ಅಂಟಿಕೊಂಡು ಚಡಪಡಿಸುತ್ತಿದ್ದವು. ಜೊತೆಗೆ ಬೇರೆ ಬೇರೆ ಹೊಸ ನೊಣಗಳು ಜೇನಿನ ಲೋಭದಿಂದ ಅಲ್ಲಿಗೆ ಬರುತ್ತಿದ್ದವು. ಸತ್ತಿರುವ ಮತ್ತು ಚಡಪಡಿಸುತ್ತಿದ್ದ ನೊಣಗಳನ್ನು ನೋಡಿಯೂ ಜೇನು ತಿನ್ನುವ ಲೋಭವನ್ನು ಬಿಡಲಾರದಾಗಿದ್ದವು.



ನೊಣಗಳ ದುರ್ಗತಿಯನ್ನೂ ಮೂರ್ಖತನವನ್ನೂ ನೋಡಿ ವ್ಯಾಪಾರಿಯು ಹೇಳಿದನು: ''ಯಾರು ನಾಲಿಗೆಯ ರುಚಿಗೆ ಗುಲಾಮರಾಗುವರೋ ಅವರು ನೊಣಗಳಂತೆ ವಿಪತ್ತಿಗೆ ಒಳಗಾಗುತ್ತಾರೆ. ರಸನೇಂದ್ರಿಯದ ಕ್ಷಣಿಕ ಸುಖಕ್ಕೆ ತಮ್ಮ ಆರೋಗ್ಯವನ್ನು ಹಾಳು ಮಾಡಿಕೊಳ್ಳುತ್ತಾರೆ. ರೋಗಿಗಳಾಗಿ ಚಡಪಡಿಸುತ್ತಾರೆ ಮತ್ತು ಬೇಗನೆ ಮೃತ್ಯುವಶರಾಗುತ್ತಾರೆ.''

*ಕೃಪೆ: ಗೀತಾಪ್ರೆಸ್, ಗೋರಖ್‌ಪುರ*

## ನಿಜವಾದ ಶಕ್ತಿ

''ನನ್ನ ಮನಸ್ಸಿನಲ್ಲಿ ಗತಕಾಲದ ಪಾಶ್ಚಾತ್ಯ ಚಕ್ರವರ್ತಿ ಅಲೆಕ್ಸಾಂಡರನ ಚಿತ್ರ ಬರುವುದು. ಅವನು ಸಿಂಧೂನದಿಯ ತೀರದ ಕಾಡಿನಲ್ಲಿ ನಮ್ಮ ದೇಶದ ಸಂನ್ಯಾಸಿಯೊಬ್ಬನೊಂದಿಗೆ ಮಾತನಾಡುವುದು ಜ್ಞಾಪಕಕ್ಕೆ ಬರುವುದು. ಅವನು ಮಾತನಾಡುತ್ತಿದ್ದ ವೃದ್ಧ ಬಹುಶಃ ನಗ್ನನಾಗಿ ಕಲ್ಲುಬಂಡೆಯೊಂದರ ಮೇಲೆ ಕುಳಿತಿದ್ದನು. ಅಲೆಕ್ಸಾಂಡರ್ ಅವನ ಜ್ಞಾನಕ್ಕೆ ವಿಸ್ಮಿತನಾಗಿ ''ಗ್ರೀಸ್ ದೇಶಕ್ಕೆ ಬಾ'' ಎಂದು ಕೀರ್ತಿಯ ಮತ್ತು ಹಣದ ಆಸೆಯನ್ನು ತೋರಿಸಿದನು. ಸಂನ್ಯಾಸಿ ಆತನು ಒಡ್ಡಿದ ಹೊನ್ನಿನ ವಿಷಯಕ್ಕೆ ನಕ್ಕನು, ಒಡ್ಡಿದ ಪ್ರಲೋಭನೆಯನ್ನು ನೋಡಿ ನಕ್ಕನು. ಎಲ್ಲವನ್ನೂ ನಿರಾಕರಿಸಿದನು. ಚಕ್ರವರ್ತಿ ತನ್ನ ಅಧಿಕಾರದ ದರ್ಪದಿಂದ, ''ನೀನು ಬರದೇ ಇದ್ದರೆ ನಿನ್ನನ್ನು ಕೊಲ್ಲುತ್ತೇನೆ' ಎನ್ನುವನು. ಆಗ ಸಂನ್ಯಾಸಿ ನಕ್ಕು, ''ಈಗ ಹೇಳಿದಂತಹ ಸುಳ್ಳನ್ನು ನೀನು ಜೀವನದಲ್ಲಿ ಎಂದೂ ಹೇಳಿಲ್ಲ. ಬಾಹ್ಯ ಪ್ರಪಂಚದ ಚಕ್ರವರ್ತಿಯಾದ ನೀನು ನನ್ನನ್ನು ಕೊಲ್ಲುವೆಯಾ? ಎಂದಿಗೂ ಇಲ್ಲ! ಎಂದಿಗೂ ಹುಟ್ಟದ, ನಾಶವಾಗದ ಆತ್ಮ ನಾನು. ನನಗೆ ಜನನ ಮರಣಗಳಿಲ್ಲ, ನಾನು ಅನಂತ, ಸರ್ವವ್ಯಾಪಿ, ಸರ್ವಜ್ಞ. ನೀನು ಹಸುಳೆ. ನನ್ನನ್ನು ಕೊಲ್ಲುವೆಯಾ!'' ಎಂದನು. ಅದು ಶಕ್ತಿ! ಅದು ಶಕ್ತಿ!''

— ಸ್ವಾಮಿ ವಿವೇಕಾನಂದ